# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1592
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ ಮೂರು ವರ್ಷಗಳಲ್ಲಿ (2023-24 ರಿಂದ 2025-26ರವರೆಗೆ) ವಿವಿಧ ಸಾರಿಗೆ ನಿಗಮಗಳ ವತಿಯಿಂದ 15 ವರ್ಷ ಮೇಲ್ಪಟ್ಟ ಎಷ್ಟು ಸರ್ಕಾರಿ ವಾಹನಗಳನ್ನು ವಿಲೇವಾರಿ ಮಾಡಲಾಗಿದೆ; ನಿಗಮವಾರು ವಿವರ ಒದಗಿಸುವುದು;</td><td>ನಾಲ್ಕು ಸಾರಿಗೆ ಸಂಸ್ಥೆಗಳಿಂದ 2023-24 ರಿಂದ 2025-26ರವರೆಗೆ ಕಳೆದ ಮೂರು ವರ್ಷಗಳಲ್ಲಿ 15 ವರ್ಷ ಮೇಲ್ಪಟ್ಟ ವಿಲೇವಾರಿ ಮಾಡಲಾದ ನಿಗಮವಾರು ಬಸ್‌ಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಕ.ರಾ.ರ.ಸಾ. ನಿಗಮ</th><th>ಬೆಂ.ಮ.ಸಾ. ಸಂಸ್ಥೆ</th><th>ವಾ.ಕ.ರ.ಸಾ. ಸಂಸ್ಥೆ</th><th>ಕ.ಕ.ರ.ಸಾ. ನಿಗಮ</th></tr>
<tr><td>2023-24</td><td>53</td><td>245</td><td>27</td><td>165</td></tr>
<tr><td>2024-25</td><td>41</td><td>919</td><td>90</td><td>0</td></tr>
<tr><td>2025-26</td><td>219</td><td>815</td><td>225</td><td>608</td></tr>
<tr><td>ಒಟ್ಟು</td><td>313</td><td>1979</td><td>342</td><td>773</td></tr>
</table>
ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: GSR 29 (E), ದಿನಾಂಕ:16.01.2023ರನ್ವಯ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದನುಸಾರ ಸಾರಿಗೆ ನಿಗಮಗಳ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿರುವುದರಿಂದ ಅವಧಿ ಮೀರಿರುವ ಬಸ್‌ಗಳು ಯಾವುದು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>
ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸುತ್ತೋಲೆ ಸಂಖ್ಯೆ: 810/2023, ದಿನಾಂಕ:23.09.2023 ರಲ್ಲಿನ ಮಾನದಂಡಗಳನ್ವಯ ನಿಗಮದಲ್ಲಿನ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲಾಗುತ್ತಿದೆ.<br><br>
ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿ.ಮೀ. ಕ್ರಮಿಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳಿಗೆ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>
ಆದಾಗ್ಯೂ, ಪ್ರತಿ ವರ್ಷ ನಿಗಮದ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಪ್ರಸ್ತುತ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ.</td></tr>
<tr><td>ಆ.</td><td>ಈ ವಿಲೇವಾರಿಯಿಂದ ಸರ್ಕಾರಕ್ಕೆ/ ನಿಗಮಗಳಿಗೆ ನಿರೀಕ್ಷಿಸಲಾದ</td><td>ರಾಜ್ಯದ ನಾಲ್ಕು ಸಾರಿಗೆ ನಿಗಮಗಳು 2023-24 ರಿಂದ 2025-26ರವರೆಗೆ ನಿರೀಕ್ಷಿಸಲಾದ ಆದಾಯದ ವಿವರ ಈ ಕೆಳಕಂಡಂತಿದೆ:<br><br>
(ರೂ ಲಕ್ಷಗಳಲ್ಲಿ)</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

ಆದಾಯ ಎಷ್ಟು; ವಾಸ್ತವವಾಗಿ ಲಭಿಸಿದ ಆದಾಯ ಎಷ್ಟು; (ವಿವರ ಒದಗಿಸುವುದು)

| ವರ್ಷ | ಕ.ರಾ.ರ.ಸಾ. ನಿಗಮ | ಬೆಂ.ಮ.ಸಾ. ಸಂಸ್ಥೆ | ವಾ.ಕ.ರ.ಸಾ. ಸಂಸ್ಥೆ | ಕ.ಕ.ರ.ಸಾ. ನಿಗಮ | ಒಟ್ಟು |
|---|---|---|---|---|---|
| 2023-24 | 962.00 | 442.96 | 1487.70 | 660.00 | 3552.66 |
| 2024-25 | 875.00 | 1661.55 | 1195.10 | 702.00 | 4433.65 |
| 2025-26 | 870.00 | 1473.52 | 427.50 | 728.00 | 3499.02 |
| **ಒಟ್ಟು** | **2707.00** | **3578.03** | **3110.30** | **2090.00** | **11485.33** |

ನಿರುಪಯುಕ್ತಗೊಳಿಸಲಾದ ವಾಹನಗಳಿಂದ ಸಂಗ್ರಹವಾದ ಮೊತ್ತ (ರೂ ಕೋಟಿಗಳಲ್ಲಿ)

| ವರ್ಷ | ಕ.ರಾ.ರ.ಸಾ. ನಿಗಮ | ಬೆಂ.ಮ.ಸಾ. ಸಂಸ್ಥೆ | ವಾ.ಕ.ರ.ಸಾ. ಸಂಸ್ಥೆ | ಕ.ಕ.ರ.ಸಾ. ನಿಗಮ | ಒಟ್ಟು |
|---|---|---|---|---|---|
| 2022-23 | 11.85 | 7.75 | 2.56 | 14.35 | **36.51** |
| 2023-24 | 3.37 | 16.00 | 0.92 | 3.37 | **23.66** |
| 2024-25 | 2.41 | 12.04 | 1.75 | - | **16.20** |
| **ಒಟ್ಟು** | 17.63 | 35.79 | 5.23 | 17.72 | **76.37** |

ಇ. ಹಳೆಯ ವಾಹನಗಳ ಬದಲಿಗೆ ಹೊಸ ವಾಹನಗಳನ್ನು ಖರೀದಿಸಲು ಸರ್ಕಾರದ ಮುಂದಿನ ಯೋಜನೆ ಏನು; ಬಸ್ಸುಗಳ ಸಂಖ್ಯೆ, ವೆಚ್ಚ ಮತ್ತು ಕಾಲಮಿತಿ ವಿವರ ಒದಗಿಸುವುದು?

ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:

| ಸಂಸ್ಥೆಗಳು | 2023-24 (Jan) | 2024-25 | 2025-26 | ಒಟ್ಟು |
|---|---|---|---|---|
| ಕ.ರಾ.ರ.ಸಾ. ನಿಗಮ | 510 | 698 | 10+60* +45** | 1323 |
| ಬೆಂ.ಮ.ಸಾ. ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | - | 2365 |
| | 341 ಇ.ವಿ | 755 ಇ.ವಿ | 429 ಇ.ವಿ | |
| ವಾ.ಕ.ರ.ಸಾ. ಸಂಸ್ಥೆ | 296 | 560 | 11+ 354*** | 1221 |
| ಕ.ಕ.ರ.ಸಾ. ನಿಗಮ | 720 | 307 | 146 | 1173 |
| **ಒಟ್ಟು** | **1887** | **3140** | **1055** | **6082** |

*ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ನಾನ್ ಎ.ಸಿ. ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

** ನಿಗಮಕ್ಕೆ 45 ಸಂಖ್ಯೆಯ ಕರ್ನಾಟಕ ಸಾರಿಗೆ ಮಾದರಿಯ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

***ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 354 ಹೊಸ ಬಸ್‌ಗಳನ್ನು ಖರೀದಿಸಲು ಖರೀದಿ ಆದೇಶ ನೀಡಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಸಾರಿಗೆ ನಿಗಮಗಳಿಗೆ ಸೇರ್ಪಡೆಗೊಳ್ಳಲಿರುವ ಒಟ್ಟು ಬಸ್‌ಗಳು ವಿವರ ಕೆಳಕಂಡಂತಿರುತ್ತದೆ:

| ಸಂಸ್ಥೆ/ ನಿಗಮ | ಬಸ್‌ಗಳ ಸಂಖ್ಯೆ | ಬಸ್‌ಗಳ ವಿವರ |
|---|---|---|
| ಕ.ರಾ.ರ.ಸಾ.ನಿಗಮ | 644 | 500 ಗ್ರಾಮಾಂತರ+ 144 ಡಬಲ್ ಡೋರ್ (ನಗರ) |
| ವಾ.ಕ.ರ.ಸಾ.ಸಂಸ್ಥೆ | 150 | ಗ್ರಾಮಾಂತರ ಬಸ್‌ಗಳು |
| ಕ.ಕ.ರ.ಸಾ.ನಿಗಮ | 56 | ವಿವಿಧ ರೀತಿಯ ಪ್ರೀಮಿಯಂ ಬಸ್‌ಗಳು |
| **ಒಟ್ಟು** | **850** | |

2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 469(iii)ರಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ 2000 ಸಂಖ್ಯೆಯ ಹೊಸ ಡೀಸೆಲ್ ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದು ಘೋಷಿಸಿದ್ದು, ಅದರನ್ವಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 700 ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400ರಂತೆ, ಒಟ್ಟು 2000 ಸಂಖ್ಯೆಯ ಹೊಸ ಬಿ.ಎಸ್-VI ಡೀಸೆಲ್ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.

ಅದರಲ್ಲಿ ಈಗಾಗಲೇ 300 ಡೀಸೆಲ್ ಬಸ್ಸುಗಳನ್ನು ರೂ.12353.00 ಲಕ್ಷಗಳ ಅನುದಾನದಲ್ಲಿ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 21 ಟಿಸಿಬಿ 2025, ದಿನಾಂಕ:21.04.2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸರ್ಕಾರದಿಂದ ನೀಡಿದ ರೂ.123.53 ಕೋಟಿ ಅನುದಾನದಲ್ಲಿ 330 ಬಸ್ಸುಗಳನ್ನು ಖರೀದಿಸಲು ಖರೀದಿ ಆದೇಶ ನೀಡಲಾಗಿದ್ದು, ಮಾರ್ಚ್-2026ರೊಳಗೆ ಎಲ್ಲಾ ಬಸ್‌ಗಳು ನಿಗಮಕ್ಕೆ ಸೇರ್ಪಡೆಗೊಳ್ಳಲಿವೆ.

ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 150 ಸಂಖ್ಯೆಯ ಪೂರ್ಣ ನಿರ್ಮಿತ ಬಿ.ಎಸ್-VI ಕರ್ನಾಟಕ Mofussil ಸಾರಿಗೆ ಬಸ್ಸುಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 33 ಟಿಸಿಬಿ 2025, ದಿನಾಂಕ: 30.01.2026ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕುರಿತು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿದ 620 ಬಸ್ಸುಗಳಿಗೆ ಅನುದಾನ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br><br>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಒಟ್ಟು 750 ವಿದ್ಯುತ್ ಚಾಲಿತ ಬಸ್ಸುಗಳು ಮತ್ತು PM e-drive ಯೋಜನೆಯಡಿ ಬೆಂ.ಮ.ಸಾ.ಸಂಸ್ಥೆಗೆ 4500 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ.<br><br>2026 27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480 ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. |

ಸಂಖ್ಯೆ: ಟಿಡಿ 96 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಮುಜರಾಯಿ ಸಚಿವರು**